

# ಕಲ್ಲರಳಿ ಕೃಷಿಯಾಗಿ..

ಕಳೆದ ಕೆಲವು ವರ್ಷಗಳಲ್ಲಿ ಇವರ ತೋಟದಿಂದ ಮಾವು ಮತ್ತು ಕಲ್ಲಂಗಡಿ ಹಣ್ಣುಗಳು ಹೆಚ್ಚಿನ ಪ್ರಮಾಣದಲ್ಲಿ ವಿದೇಶಗಳಿಗೆ ರಫ್ತಾಗಿವೆ.

ಚಿತ್ರ-ಲೇಖನ: **ಧರ್ಮಾನಂದ ಶಿರ್ವ**







**ಕ**ಲ್ಲು ಬಂಡೆಗಳ ನಡುವೆ ಸಮತಟ್ಟಿಲ್ಲದ ಎತ್ತರ ತಗ್ಗುಗಳ ಜಮೀನಿನಲ್ಲಿ ತೋಟಗಾರಿಕೆ ಮಾಡುವುದು ಒಂದು ಸವಾಲು. ಅದನ್ನು ಸ್ವೀಕರಿಸಿ ಅತ್ಯಂತ ಯಶಸ್ವಿಗೊಳಿಸಿದ ಯುವ ಕೃಷಿಕ ಸಂತೋಷ್ ಸರನಾಡಗೌಡರ್ ಅವರದು ಒಂದು ದೊಡ್ಡ ಸಾಧನೆಯೇ ಸರಿ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕು ಮೇಣೆದಾಳಿನ ಇವರು ಎಂ.ಬಿ.ಎ. ಪದವೀಧರ!

ಸಂತೋಷ್ ಯಾವುದೋ ಉದ್ಯೋಗದಲ್ಲಿ ಕಳೆದುಹೋಗದೇ ಮುಂಚಿನಿಂದ ಇದ್ದ ಕೃಷಿಯ ತುಡಿತಕ್ಕೆ ಶರಣಾದರು. ಕೃಷಿ ಕುಟುಂಬದಿಂದ ಬಂದ ಇವರಿಗೆ ಒತ್ತಾಸೆಯಾಗಿ ನಿಂತವರು ಬ್ಯಾಂಕ್ ಅಧಿಕಾರಿಯಾಗಿದ್ದು ಇತ್ತೀಚೆಗೆ ನಿವೃತ್ತರಾಗಿ ಸಾಹಿತ್ಯ ಕೃಷಿಯಲ್ಲೂ ತಮ್ಮನ್ನು ತೊಡಗಿಸಿಕೊಂಡ ತಂದೆ ಶೇಖರಗೌಡ ವೀ ಸರನಾಡಗೌಡರ್ ಮತ್ತು ತಾಯಿ ಅಕ್ಕಮಹಾದೇವಿ. ಅವರ 'ಮಹಾಮನೆ'ಯೂ ಅನ್ವರ್ಥಕವಾಗಿ ಬಂದವರ ಪಾಲಿಗೆ ಆದರಾತಿಥ್ಯಗಳ ನೆಲೆಯಾಗಿದೆ.

ಕಲ್ಲುಮಿಶ್ರಿತ ಕೆಂಪು ಮಣ್ಣಿನ ನೆಲವನ್ನು ಸಮತಟ್ಟಾಗಿಸಿ, ಹದಗೊಳಿಸಿ, ಬೆಳೆ ಬೆಳೆಯುವಲ್ಲಿ ಅವರು ಬಸಿದ ಬೆವರು, ಪಟ್ಟ ಪರಿಶ್ರಮ, ಎದುರಿಸಿದ ಆರ್ಥಿಕ ಮುಗ್ಗಟ್ಟು ಎಲ್ಲವೂ, ಅವರೇ ಹೇಳುವಂತೆ, ಕಣ್ಣೆದುರು ಅರಳಿ ನಿಂತ ಫಲಭರಿತ ಹಸಿರನ್ನು ಕಂಡಾಗ ಮಾಯವಾಗುತ್ತದೆ. ಅವರದು ಕಳೆದ ಹನ್ನೆರಡು ವರ್ಷಗಳ ಶ್ರಮ.

ತೋಟದ ಒಳಹೊಕ್ಕರೆ ದಾಳಿಂಬೆ, ಮಾವು, ಪೇರಳೆ, ಚಿಕ್ಕು, ನೇರಳೆ,